## ವಿಭಿನ್ನ ತೀರ್ಥದ ತೊಟ್ಟಿ

ಶಿವ ಲಿಂಗದ ಅಭಿಷೇಕಕ್ಕೆ ಉಪಯೋಗಿಸಿದ ದ್ರವ್ಯಗಳು ಸೋಮಸೂತ್ರದ ಮೂಲಕ ಉತ್ತರ ದಕ್ಕಿಗೆ ಹರಿದು, ಗೋಮುಖದಿಂದ ಹೊರಬಂದು ಶೇಖರಣೆಗೊಳ್ಳಲು ಚೌಕಾಕಾರದ ತೊಟ್ಟಿಯನ್ನು ನೆಲಕ್ಕೆ ಸಮತಟ್ಟಾಗಿ ರಚಿಸಿರುವುದನ್ನು ಎಲ್ಲ ದೇವಾಲಯಗಳಲ್ಲೂ ನೋಡಿರುತ್ತೇವೆ. ಆದರೆ ತಮಿಳುನಾಡಿನ ವೆಲ್ಲೂರಿನಲ್ಲಿರುವ ಜಲಕಂಠೇಶ್ವರ ದೇವಾಲಯದಲ್ಲಿ ಗೋಮುಖದ ಕೆಳಗೆ ಕಲ್ಲನ್ನು ಕೊರೆದು ತಯಾರಿಸಲಾದ ವೃತ್ತಾಕಾರದ ತೊಟ್ಟಿಯಿದೆ. ಇದು ಸುಮಾರು ನಾಲ್ಕು ಅಡಿ ಎತ್ತರ, ಐದಡಿ ವ್ಯಾಸ, ನಾಲ್ಕು ಇಂಚು ದಪ್ಪವಿದ್ದು ಕಲ್ಲಿನಲ್ಲಿ ಕೊರೆಯಲಾಗಿದೆ.

**-ಜೆ.ನಾಗೇಂದ್ರ, ಮಂಗಳೂರು**





## ಮೂಲನಂದೀಶ್ವರ

ಜಗತ್ತಿಗೆ ವಚನಗಳ ಮೂಲಕ ಬದುಕಿನ ಸಂದೇಶವನ್ನು ಸರಳವಾಗಿ ಸಾರಿದ ಬಸವಣ್ಣನವರ ತಂದೆ ಮಾದರಸ ಮತ್ತು ಮಾದಲಾಂಬಿಕೆ ಅವರಿಗೆ ಹಲವಾರು ವರುಷಗಳ ಕಾಲ ಮಕ್ಕಳು ಆಗಲಿಲ್ಲವಂತೆ. ನಂತರ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯ ಮೂಲನಂದೀಶ್ವರನಿಗೆ ಹರಕೆ ಹೊತ್ತ ಪರಿಣಾಮ ಬಸವಣ್ಣನವರು ಜನಿಸಿದರು ಎಂಬ ಪ್ರತೀತಿ ಇದೆ. ಹೀಗಾಗಿ ಮೂಲ ನಂದೀಶ್ವರ ದೇವಸ್ಥಾನ ಜನರ ಆಡು ಭಾಷೆಯಲ್ಲಿ ಶ್ರೀಬಸವೇಶ್ವರ ದೇವಸ್ಥಾನವಾಗಿದೆ. ಪ್ರಸ್ತುತ ಹಲವಾರು ವೈಶಿಷ್ಟಗಳ ಆಗರವಾಗಿ ಭಕ್ತರ ಶ್ರದ್ಧಾ ಕೇಂದ್ರವಾಗಿ ಕೈ ಬೀಸಿ ಕರೆಯುತ್ತಿದೆ.

**-ಗುರುರಾಜ ಬ.ಕನ್ನೂರ, ಬಸವನಬಾಗೇವಾಡಿ**

## ಕೋಟೇಶ್ವರದಲ್ಲಿ ಐಫೆಲ್ ಟವರ್

ಕೊಡಿಹಬ್ಬದ ಪ್ರಯುಕ್ತ ಕೋಟೇಶ್ವರ ರಾಮನಾಥ ಗೋಳಿಕಟ್ಟೆ ಫ್ರೆಂಡ್ಸ್ ನೇತೃತ್ವದಲ್ಲಿ ರಚಿಸಿದ ಪ್ಯಾರಿಸ್‌ನ ಐಫೆಲ್ ಟವರ್ ಮಾದರಿ ಜನಮನ ಸೂರೆಗೊಂಡಿತು. 32 ಅಡಿ ಎತ್ತರದ, 14 ಅಗಲದ ಈ ಟವರನ್ನು ಪ್ಲೈವುಡ್, ಕಬ್ಬಿಣ ಹಾಗೂ ಥರ್ಮಾಫೋಮ್ ಬಳಸಿ ನಿರ್ಮಿಸಿದವರು ಗೋಪಾಡಿಯ ಜಿ.ವಿ.ಆರ್ಟ್ಸ್‌ನ ವೆಂಕಟೇಶ ಆಚಾರ್ಯ ಹಾಗೂ ತಂಡದವರು.

**-ಪಿ.ಜಯವಂತ ಪೈ, ಕುಂದಾಪುರ**

